ಕೆ.ಜಿ.ಎಫ್. ಅನ್ನು ಪ್ರತ್ಯೇಕ ತಾಲ್ಲೂಕನ್ನಾಗಿ ರಚಿಸುವ ಕುರಿತು.

೬೯೮. ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲೆಗಳ ಪುನರ್ವಿಂಗಡಣೆ ಬಗ್ಗೆ ಶ್ರೀ ಪಿ.ಸಿ. ಗದ್ದೀಗೌಡರ್‌ರವರು ದಿನಾಂಕ ೭–೭–೧೯೮೭ ರಂದು ಸಲ್ಲಿಸಿರುವ ವರದಿಯನ್ನು ಸರ್ಕಾರವು ಅಂಗೀಕರಿಸಿದೆಯೇ ;

ಆ) ಶ್ರೀ ಹುಂಡೇಕರ್ ಸಮಿತಿಯು ಶಿಫಾರಸು ಮಾಡಿರುವಂತೆ ಕೆ.ಜಿ.ಎಫ್. ಅನ್ನು ಪ್ರತ್ಯೇಕ ತಾಲ್ಲೂಕನ್ನಾಗಿ ರಚಿಸುವುದನ್ನು ಸರ್ಕಾರವು ಅಂಗೀಕರಿಸಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ, ಜಿಲ್ಲೆಯಲ್ಲಿ ಅತಿ ದೊಡ್ಡ ನಗರವಾದ ಕೆ.ಜಿ.ಎಫ್ ಅನ್ನು ಪ್ರತ್ಯೇಕ ತಾಲ್ಲೂಕನ್ನಾಗಿ ರಚಿಸುವ ಬಗ್ಗೆ ಸರ್ಕಾರವು ಪರಿಗಣನೆಮಾಡುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಮತ್ತು ಆ) ಶ್ರೀ ಟಿ. ಎಂ. ಹುಂಡೇಕರ್ ಮತ್ತು ಶ್ರೀ ಪಿ. ಸಿ. ಗದ್ದೀಗೌಡರ್, ಇವರ ವರದಿಗಳು ಸರ್ಕಾರದ ತೀವ್ರ ಪರಿಗಣನೆಯಲ್ಲಿರುತ್ತವೆ.

ಇ) ಉದ್ಭವಿಸುವುದಿಲ್ಲ.

ಸಹಕಾರಿ ಸಂಸ್ಥೆಗಳಿಗೆ ಸಾಲ ನೀಡಲು ಆರ್ಥಿಕ ಸಂಸ್ಥೆಗಳಿಂದ ಪಡೆದ ಹಣದ ಬಗ್ಗೆ

೪೨೧. ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫ನೇ ಸಾಲಿನಿಂದೀಚೆಗೆ ರಾಜ್ಯದಲ್ಲಿನ ವಿವಿಧ ಸಹಕಾರಿ ಸಂಸ್ಥೆಗಳಿಗೆ ಸಾಲ ನೀಡಲು ಆರ್ಥಿಕ ಸಂಸ್ಥೆಗಳಿಂದ ತೆಗೆದುಕೊಂಡಿರುವ ಸಾಲದ ಮೊತ್ತವೆಷ್ಟು?

ಆ) ೧೯೮೫ ರಿಂದ ೧೯೮೭ರ ಡಿಸೆಂಬರ್‌ವರೆವಿಗೆ ಅಂತಹ ಸಹಕಾರಿ ಸಂಸ್ಥೆಗಳಿಗೆ ಕೊಟ್ಟ ಸಾಲದ ಮೊತ್ತವೆಷ್ಟು ?

ಇ) ೩೧–೧೨–೧೯೮೭ಕ್ಕೆ ಇದ್ದಂತೆ ಬಾಕಿ ಸಂದಾಯಗಳ ಮೊತ್ತವೆಷ್ಟು ?

ಈ) ಸುಸ್ತಿದಾರರಿಂದ ಬಾಕಿ ಇರುವ ಸಾಲ ಮತ್ತು ಬಡ್ಡಿಗಳ ಒಟ್ಟು ಮೊತ್ತ ವೆಷ್ಟು ?

ಶ್ರೀ ಜೆಚ್. ವಿಶ್ವನಾಥಯ್ಯ (ಸಹಕಾರ ಸಚಿವರು).—

ಅ) ರಾಜ್ಯದಲ್ಲಿನ ವಿವಿಧ ಸಹಕಾರಿ ಸಂಸ್ಥೆಗಳು ಸಾಲ ನೀಡಲು ಆರ್ಥಿಕ ಸಂಸ್ಥೆಗಳಿಂದ, ೧೯೮೫ ರಿಂದೀಚೆಗೆ ರೂ. ೫೯೨.೦೦ ಕೋಟಿಗಳನ್ನು ಸಾಲವಾಗಿ ಪಡೆದಿರುತ್ತೆ.

ಆ) ವಿವಿಧ ಸಹಕಾರಿ ಸಂಸ್ಥೆಗಳಿಂದ ೧೯೮೫ ರಿಂದ ೩೧–೧೨–೧೯೮೭ರವರೆವಿಗೆ ರೂ. ೪೧೧.೭೬ ಕೋಟಿಗಳನ್ನು ಸಾಲವಾಗಿ ಕೊಟ್ಟಿದೆ.

ಇ) ೩೧–೧೨–೧೯೮೭ಕ್ಕೆ ಸಂದಾಯವಾಗಬೇಕಾದ ಮೊತ್ತ ಅಸಲು ಮತ್ತು ಬಡ್ಡಿ ಸೇರಿ ರೂ. ೫೧೯.೬೨ ಕೋಟಿ ಆಗುತ್ತದೆ.

ಈ) ಸುಸ್ತಿದಾರರಿಂದ ಅಸಲು ಮತ್ತು ಬಡ್ಡಿ ಸೇರಿ ರೂ. ೧೨೭.೮೬ ಕೋಟಿ ವಸೂಲಾಗ ಬೇಕಾಗಿರುತ್ತೆ.